INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -5, September-October, 2023,
PageNo,77-86
Peer -Reviewed, Refereed Journal

# ಮೈಸೂರು ವಿಶ್ವವಿದ್ಯಾನಿಲಯ ಬೆಳೆದುಬಂದ ಐತಿಹಾಸಿಕ ಪರಂಪರೆ–ಒಂದು ವಿವೇಚನೆ

**ರಮೇಶ .**[1]

ಮೈಸೂರು ಎಂದೊಡನೆ ನಮಗಳಿಗೆ ಮೊದಲಿಗೆ ಯದುವಂಶದ ರಾಜ ಒಡೆಯರ್‌ರವರ ನೆನಪು ಬರುತ್ತದೆ. ಅಲ್ಲದೆ ಅಂದಿನ ಕಾಲದ ಸುಂದರವಾದ ದಸರೆಯ ನೆನಪು ಬರುತ್ತದೆ. ಮೈಸೂರು ಅರಮನೆಯ ಚಿತ್ರಣಗಳು ನಮ್ಮ ಕಣ್ಣಮುಂದೆ ಬರುತ್ತದೆ. ಅಲ್ಲದೆ ಇನ್ನೂ ಸಾಕಷ್ಟು ವಿಚಾರಗಳನ್ನು ತಿಳಿಸುವುದರಲ್ಲಿ ಮೈಸೂರು ಪರಂಪರೆಯ ಇತಿಹಾಸವೇ ಇದೆ. ಈ ಇತಿಹಾಸವನ್ನು ಹೊಂದಿರುವ ಸಾಂಸ್ಕೃತಿಕ ನಗರಿಯಲ್ಲಿ ಶಿಕ್ಷಣಕ್ಷೇತ್ರಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಅಪಾರವಾದ ಕೊಡುಗೆಯನ್ನು ನೀಡಿದೆ. ಮೈಸೂರು ವಿಶ್ವವಿದ್ಯಾನಿಲಯ ಕರ್ನಾಟಕದಲ್ಲಿಯೇ ಮೊಟ್ಟಮೊದಲ ವಿಶ್ವವಿದ್ಯಾನಿಲಯವಾಗಿದೆ. ಮೈಸೂರಿನ ಒಡೆಯರ್‌ರವರು ಮೈಸೂರು ಸಂಸ್ಥಾನವನ್ನು ಸ್ಥಾಪಿಸಿ, ವೃದ್ಧಿಸಿ, ಅಭಿವೃದ್ಧಿಗೊಳಿಸಿ ಆಳ್ವಿಕೆ ಮಾಡಿದ ಯದುವಂಶದ ಒಡೆಯರ್ ಅರಸರು ಸುಮಾರು 550 ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಾರೆ.[1] ಕ್ರಿ.ಶ.1399 ರಲ್ಲಿ ಪ್ರಾರಂಭವಾಗಿ 1947 ರಲ್ಲಿ ಸ್ವತಂತ್ರ ಭಾರತದಲ್ಲಿ ವಿಲೀನವಾಗುವವರೆಗೆ ಮೈಸೂರು ಸಂಸ್ಥಾನವನ್ನು ಆಳಿದ ದೊರೆಗಳ ಸಂಖ್ಯೆ ಇಪ್ಪತ್ತೈದು. ಇವರೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.[2]

1902ರಲ್ಲಿ ತಮ್ಮ 18ನೇ ವಯಸ್ಸಿನಲ್ಲಿ ಸ್ವತಂತ್ರವಾದ ಅಧಿಕಾರ ನಿರ್ವಹಣೆಯನ್ನು ಪ್ರಾರಂಭಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಆಧುನಿಕ ಮೈಸೂರಿನ "ನವನಿರ್ಮಾಣದ ಶಿಲ್ಪಿ" ಎನಿಸಿಕೊಂಡರು. ಇವರ ಕಾಲಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದೆ.[3] ಅದಕ್ಕೂ ಮೊದಲು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಕಾಲೇಜುಗಳನ್ನು ಸ್ಥಾಪಿಸುವುದಕ್ಕೆ ಮೊದಲೇ ಶಿಕ್ಷಣವು ಮಠಮಾನ್ಯಗಳಲ್ಲಿ ಅಲ್ಲದೆ ಮಸೀದಿ ಅಂದರೆ ಮದ್ರಸಾ ಎಂಬ ಮುಸ್ಲಿಂ ಕಾಲೇಜುಗಳಲ್ಲಿ ನಡೆಯುತ್ತಿತ್ತು. ಪ್ರಾಥಮಿಕ ಶಿಕ್ಷಣ ದೇಶಿ ಭಾಷೆಗಳಲ್ಲಿ ತಮಿಳುನಾಡಿನ ಹಾಗೂ ಆಂಧ್ರಪ್ರದೇಶದ ಪಳ್ಳಿಕೂಟಂಗಳಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ಶಾಲೆಗಳಲ್ಲಿ ದೊರೆಯುತ್ತಿತ್ತು. ಒಟ್ಟಾರೆ ನೋಡುವುದಾದರೆ ಭಾರತ ದೇಶದ ಯಾವ ಭಾಗದಲ್ಲಿಯೇ ಆಗಲಿ ಸರ್ಕಾರದ ಆಡಳಿತಕ್ಕೊಳಪಟ್ಟ ಶಿಕ್ಷಣದ ಇಲಾಖೆ ಇರಲಿಲ್ಲ. ಆದರೆ ಮೈಸೂರು

[1].**ಸಂಶೋಧಕರು, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.**

ಸಂಸ್ಥಾನದಲ್ಲಿ ವೆಸ್ಲಿಮಿಷನ್ ಪಾದ್ರಿಗಳು 1840 ಮತ್ತು 18534 ರ ಮಧ್ಯದಲ್ಲಿ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಆಧುನಿಕ ಮಾದರಿಯ ಶಾಲೆಗಳನ್ನು ಸ್ಥಾಪಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ಸ್ವಂತ ಖರ್ಚಿನಿಂದ 1840 ರಲ್ಲಿ ವೆಸ್ಲಿಮಿಷನ್ ಪಾದ್ರಿಗಳಾದ ಬಿ.ಹಡ್‌ಸನ್‌ರವರ ಮೇಲ್ವಿಚಾರಣೆಯಲ್ಲಿ ಒಂದು ಇಂಗ್ಲೀಷ್ ಶಾಲೆಯನ್ನು ಸ್ಥಾಪಿಸಿದರು. 1842 ರಲ್ಲಿ ಅದೇ ವೆಸ್ಲಿ ಮಿಷನ್‌ನ ರೆವರೆಂಡ್ ಜೆ.ಗಾರೆಟ್‌ರವರ ಆಡಳಿತಕ್ಕೊಳಪಟ್ಟಂತೆ ಬೆಂಗಳೂರಿನಲ್ಲಿ ಒಂದು ಇಂಗ್ಲೀಷ್ ಶಾಲೆಯನ್ನು ಸ್ಥಾಪಿಸಲಾಯಿತು.

ಬ್ರಿಟಿಷ್ ಇಂಡಿಯಾ ಸರ್ಕಾರ ಭಾರತದ ವಿವಿಧ ಪ್ರದೇಶಗಳಲ್ಲಿ ಶಿಕ್ಷಣ ಇಲಾಖೆಗಳನ್ನು ತೆರೆಯುವ ಕುರಿತು 1854 ರಲ್ಲಿ ಒಂದು ಆದೇಶವನ್ನು ಹೊರಡಿಸಿತು. 1857 ರಲ್ಲಿ ಮದರಾಸಿನಲ್ಲಿ ಮದರಾಸು ವಿಶ್ವವಿದ್ಯಾನಿಲಯ ಜನ್ಮ ತಾಳಿತು. ಮೈಸೂರು ಸಂಸ್ಥಾನದಲ್ಲಿ ಜುಡಿಷಿಯಲ್ ಕಮಿಷನರಾಗಿದ್ದ ಡೆವರೊ ಎಂಬುವವರು ಶಿಕ್ಷಣದ ಬಗೆಗೆ ಮೈಸೂರು ಸಂಸ್ಥಾನ ಹಾಗೂ ಕೊಡಗಿಗೆ ಸಂಬಂಧಪಟ್ಟಂತೆ ತಯಾರಿಸಿದ ಯೋಜನೆಯ ಪ್ರಕಾರ ಅದೇ ವರ್ಷವೇ ವಿದ್ಯಾಭ್ಯಾಸ ಇಲಾಖೆ ಪ್ರಾರಂಭವಾಗಿ, ಕ್ಯಾಪ್ಟನ್ ಸ್ಟೀಫನ್‌ರವರು ಇಲಾಖೆಯ ಡೈರೆಕ್ಟರ್ ಆದರು. 1858 ರಲ್ಲಿ ಬೆಂಗಳೂರಿನಲ್ಲಿ ತೆರೆದ ಸರ್ಕಾರಿ ಹೈಸ್ಕೂಲ್ ಮುಂದೆ 1875 ರಲ್ಲಿ ಕಾಲೇಜು ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಲು ಮದರಾಸು ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಟ್ಟಂತೆ ಸೆಂಟ್ರಲ್ ಕಾಲೇಜ್ ಆಗಿ ಪರಿವರ್ತನೆಯಾಯಿತು.

1871 ರಲ್ಲಿ ಐದು ಹೈಸ್ಕೂಲ್‌ಗಳು ಬಿ.ಎ. ತರಗತಿಯ ತನಕ ಶಿಕ್ಷಣವನ್ನು ನೀಡಲಾಗುತ್ತಿತ್ತು. ಆ ವರ್ಷವೇ ಪರೀಕ್ಷೆಯಲ್ಲಿ ತೆಗೆದುಕೊಂಡ 14 ವಿದ್ಯಾರ್ಥಿಗಳಲ್ಲಿ, 7 ವಿದ್ಯಾರ್ಥಿಗಳು ಮಾತ್ರ ತೇರ್ಗಡೆಯಾಗಿದ್ದರು. ಮೈಸೂರಿನ ಮಹಾರಾಜರ ಇಂಗ್ಲೀಷ್ ಶಾಲೆ ಮತ್ತು ಶಿವಮೊಗ್ಗೆಯ ವೆಸ್ಲಿಮಿಷನ್‌ಗಳು ಜಿಲ್ಲಾ ಹೈಸ್ಕೂಲ್‌ಗಳಾಗಿ ಪರಿವರ್ತನೆಗೊಂಡು ಎಫ್.ಎ. (ಫೆಲೋ ಆಫ್ ಆರ್ಟ್) ತರಗತಿಗಳನ್ನು ಹೊಂದಿದ್ದವು. ಅವುಗಳ ಜೊತೆಗೆ ವಿಶ್ವವಿದ್ಯಾನಿಲಯ ವ್ಯಾಸಂಗಕ್ಕೆ ಅವಕಾಶ ನೀಡುವ ಯುನಿವರ್ಸಿಟಿ ಎನ್‌ಟ್ರಾನ್ಸ್ ಪರೀಕ್ಷೆಗಳನ್ನು ನಡೆಸಲು 4 ಶಾಲೆಗಳಿದ್ದವು. 1881 ರಲ್ಲಿ 232 ವಿದ್ಯಾರ್ಥಿಗಳು ಕಾಲೇಜು ಎಫ್.ಎ. ಪರೀಕ್ಷೆಯಲ್ಲಿ 18 ಜನ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು.

1890 ಮತ್ತು 1893 ರ ಮಧ್ಯೆ ಕಾಲೇಜು ಎರಡನೆಯ ದರ್ಜೆಯಿಂದ ಮೊದಲ ದರ್ಜೆಯ ಶಿಕ್ಷಣ ಸಂಸ್ಥೆಯಾಯಿತು. ಸಂಸ್ಕೃತ ಹಾಗೂ ಕನ್ನಡ ಕೃತಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸಲು ಮೈಸೂರಿನಲ್ಲಿ ಓರಿಯಂಟಲ್ ಲೈಬ್ರರಿ ಸ್ಥಾಪನೆಯಾಗಿ ಒಂದು ಪಠ್ಯಪುಸ್ತಕ ಸಮಿತಿಯೂ ನೇಮಕವಾಯಿತು. ಮೈಸೂರಿನಲ್ಲಿ 1881 ರಲ್ಲಿ ತೆರೆದ ಮಹಾರಾಣಿ ಬಾಲಿಕೆಯರ ಶಾಲೆ, 1891 ರಲ್ಲಿ ಹೈಸ್ಕೂಲಾಗಿ ಪರಿವರ್ತಿಸ್ಪಟ್ಟು 1902–03 ರಲ್ಲಿ ಕಾಲೇಜ್ ಆಗಿ ರೂಪು ತಾಳಿತು. ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾಗುವುದಕ್ಕೆ ಮುಂಚೆ ಆ ಮಹಿಳಾ ಕಾಲೇಜ್‌ನಲ್ಲಿ 13 ವಿದ್ಯಾರ್ಥಿನಿಯರಿದ್ದರು. ಹೀಗೆ 1916 ರವರೆಗೂ ಮದರಾಸು ವಿಶ್ವವಿದ್ಯಾಲಯ ಬಿ.ಎ. ಪರೀಕ್ಷೆಗೆ ಅಭ್ಯರ್ಥಿಗಳನ್ನು ಕಳುಹಿಸುತ್ತಿದ್ದರು. ಮೈಸೂರಿನ

ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜು ಆ ಕಾಲದಲ್ಲಿ ವಿಶ್ವವಿದ್ಯಾನಿಲಯದ ಪದವಿಗಳನ್ನು ಪಡೆದ ಹಲವಾರು ವಿದ್ಯಾರ್ಥಿಗಳು ಕರ್ನಾಟಕಕ್ಕೆ ಕೀರ್ತಿಯನ್ನು ತಂದಿದ್ದಾರೆ. ಎಚ್.ವಿ.ನಂಜುಂಡಯ್ಯರವರು ಮೈಸೂರು ವೆಸ್ಲಿಮಿಷನ್ ಶಾಲೆಯಲ್ಲಿ ಓದಿ 1880 ರಲ್ಲಿ ಮದರಾಸಿನಲ್ಲಿ ಬಿ.ಎ. ಪದವಿ ಪಡೆದರು. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಬೆಂಗಳೂರು ಸೆಂಟ್ರಲ್ ಕಾಲೇಜ್‌ನಲ್ಲಿ ಓದಿ 1880ರಲ್ಲಿ ಪದವಿ ಪಡೆದರು. ಎಂ.ಶಾಮರಾಯರು ಸೆಂಟ್ರಲ್ ಕಾಲೇಜ್‌ನಲ್ಲಿ ಓದಿ ಮದರಾಸಿನಲ್ಲಿ ಬಿ.ಎ. ಪದವಿಯನ್ನು 1880 ರಲ್ಲಿ ಪಡೆದು 1885 ಮತ್ತು 1893ರ ಅವಧಿಯಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಎಂ.ಎ.ರಾಮಾನುಜ ಅಯ್ಯಂಗಾರ್ ಮೈಸೂರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದು, ಮದರಾಸಿನಲ್ಲಿ ಬಿ.ಎ. ಅಲ್ಲದೆ 1909 ರಲ್ಲಿ ಎಂ.ಎ. ಪದವಿಯನ್ನು ಪಡೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಿಜಿಸ್ಟ್ರಾರ್‌ರಾಗಿಯೂ 1930 ರಲ್ಲಿ ಮಹಾರಾಜ ಕಾಲೇಜಿನ ಇಂಗ್ಲೀಷ್ ವಿಭಾಗದ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರರು ಮೈಸೂರು ಮಹಾರಾಜ ಕಾಲೇಜು ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ (ಪ್ರಿನ್ಸಿಪಾಲ್ ಟೇಟ್ ಅವರ ಕಾಲದಲ್ಲಿ) ಓದಿ ಬಿ.ಎ. ಪರೀಕ್ಷೆಯಲ್ಲಿ ಇಡೀ ಮದರಾಸು ಪ್ರಾಂತ್ಯಕ್ಕೆ ಕನ್ನಡ ಇಂಗ್ಲೀಷ್ ಎರಡರಲ್ಲೂ ಮೊದಲ ಸ್ಥಾನ ಪಡೆದಿರುತ್ತಾರೆ.

## ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ ಮತ್ತು ಬೆಳವಣಿಗೆ

ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಇದರ ಪ್ರಾರಂಭಕ್ಕೆ ಸತತವಾಗಿ ಸಹಕರಿಸಿದ ಅಂದಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು 1916 ರಲ್ಲಿ ಸಂಸ್ಥಾನದಲ್ಲೇ ಮೊಟ್ಟಮೊದಲನೆಯದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೈಸೂರು ಮಹಾರಾಜ ಕಾಲೇಜು ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳು ಕೇಂದ್ರ ಸಂಸ್ಥೆಗಳಾಗಿದ್ದವು. ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಕುಲಪತಿಯಾಗಿ ಎಚ್.ವಿ.ನಂಜುಂಡಯ್ಯನವರು 1916 ರಿಂದ 1919 ರವರೆಗೆ ಸೇವೆ ಸಲ್ಲಿಸಿದ್ದಾರೆ.[4]

1915–16ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಯ ಬಗ್ಗೆ ಒಂದು ವಿಶೇಷ ಸಮಿತಿ ನೇಮಕಗೊಂಡು ಅದರ ಶಿಫಾರಸ್ಸಿನ ಪ್ರಕಾರ ಕಾನೂನನ್ನು ರಚಿಸಿ ಜುಲೈ 1916 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಯಿತು.[5] ವಿಶ್ವೇಶ್ವರಯ್ಯರವರು "ಪ್ರಜಾಪ್ರತಿನಿಧಿ" ಸಭೆಯಲ್ಲಿ ವಿಶ್ವವಿದ್ಯಾನಿಲಯದ ಕಾಯ್ದೆಯನ್ನು ಮಂಡಿಸಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳನ್ನು ಕುರಿತು ಈ ರೀತಿ ಹೇಳಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ನಿರ್ದಿಷ್ಟ ಗುರಿಗಳೆಂದರೆ ಪ್ರಜೆಗಳ ಬೌದ್ಧಿಕ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ಅದರ ಕಾರ್ಯನಿರ್ವಹಣಾ ಚಾತುರ್ಯಗಳನ್ನು ಹೆಚ್ಚಿಸುವುದಾಗಿದೆ. ನಮ್ಮ ರಾಜ್ಯದ ಭವಿಷ್ಯದ ಅಗತ್ಯಗಳಿಗೆ

ತಕ್ಕಂತೆ ಅತ್ಯುತ್ತಮ ವ್ಯಾಪಾರಸ್ಥರು, ವಾಣಿಜ್ಯೋದ್ಯಮಿಗಳು, ಆರ್ಥಿಕ ತಜ್ಞರು, ವಕೀಲರುಗಳು, ಮುತ್ಸದಿಗಳನ್ನು ತಯಾರು ಮಾಡಿ ರಾಜ್ಯದ ಅಗತ್ಯಗಳಿಗೆ ಸಿದ್ದಗೊಳ್ಳುವಂತೆ ತರಬೇತುಗೊಳಿಸುವುದಾಗಿದೆ.[6] ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕೂಡ ವಿಶೇಷ ಆಕಾಂಕ್ಷೆಗಳನ್ನು ತಲುಪುವ ಹಾಗೂ ರಾಜ್ಯದ ಬೌದ್ಧಿಕ, ಭೌತಿಕ ಪ್ರಗತಿ ಮತ್ತದರ ಮುಂದಿನ ಪರಿಣಾಮಗಳನ್ನು ಮನಗಂಡು ಸ್ಥಾಪಿಸಲಾದ ಸಂಸ್ಥೆಯಾಗಿದೆ[7] ಎಂದು ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯ ಉದ್ದೇಶವನ್ನು ಕುರಿತು ಹೇಳಿದ್ದಾರೆ.

1916ರ ವಿಶ್ವವಿದ್ಯಾನಿಲಯ ಕಾಯ್ದೆಯ ಪ್ರಕಾರ ಮೈಸೂರು ಮಹಾರಾಜರು ವಿಶ್ವವಿದ್ಯಾನಿಲಯದ ಚಾನ್ಸಲರ್ (ಕುಲಾಧಿಪತಿ) ಮತ್ತು ಯುವರಾಜ ಪ್ರೊಚಾನ್ಸಲರ್ (ಉಪಕುಲಾಧಿಪತಿ) ಸಾಮಾನ್ಯವಾಗಿ ಯುವರಾಜರೇ ಜಗನ್ಮೋಹನ ಅರಮನೆಯಲ್ಲಿ ನಡೆಯುತ್ತಿದ್ದ ಘಟಿಕೋತ್ಸವಗಳಲ್ಲಿ ಅಧ್ಯಕ್ಷರಾಗಿರುತ್ತಿದ್ದರು. ವಿಶ್ವವಿದ್ಯಾನಿಲಯದ ಕೌನ್ಸಿಲ್ ಸಭೆಯಲ್ಲಿ 9 ಮಂದಿಗೆ ಕಡಿಮೆಯಿಲ್ಲದ ಹಾಗೆ 15 ಮಂದಿಗೆ ಮೀರದ ಸದಸ್ಯರು ತರುವಾಯ ಜುಲೈ 1925 ರಲ್ಲಿ ಪುನಃರಚಿತವಾಯಿತು. ಸೆನೆಟ್ ಸಭೆಯಲ್ಲಿ ಚುನಾಯಿತರಾದ ಹಾಗೂ ನಾಮನಿರ್ದೇಶಿತರಾದ ಪ್ರಾಧ್ಯಾಪಕರು ಸದಸ್ಯರಾದರು. ವಿಶ್ವವಿದ್ಯಾನಿಲಯದ ಮೂಲಕ ಶಾಸನ 1933 ಹಾಗೂ 1939 ರಲ್ಲಿ ತಿದ್ದುಪಡಿಯಾಗಿ ಸೆನೆಟ್ ಸದಸ್ಯರ ಸಂಖ್ಯೆ ಹೆಚ್ಚಿತು.

ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದಾಗ ಅದರ ಕಛೇರಿ ಕುಲಪತಿಗಳ ಹಾಗೂ ಪ್ರಾಧ್ಯಾಪಕರ ಬಂಗಲೆಗಳು ಗೋರ್ಡನ್ ಪಾರ್ಕಿನಲ್ಲಿದ್ದವು. ಕುಲಪತಿಗಳು ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಾಗಿದ್ದು, ಅದರ ಆಡಳಿತ ಅವರ ಪೂರ್ಣ ನಿಯಂತ್ರಣಕ್ಕೊಳಪಟ್ಟಿತು. 1953 ರಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರಿನ ಮಹಾರಾಜ ಕಾಲೇಜು ಮತ್ತು 1858 ರಲ್ಲಿ ಪ್ರಾರಂಭವಾದ ಬೆಂಗಳೂರಿನ ಸೆಂಟ್ರಲ್ ಕಾಲೇಜು ವಿಶ್ವವಿದ್ಯಾನಿಲಯದ ಅಧಿಕೃತ ಕಾಲೇಜುಗಳಾದವು. 1927ರಲ್ಲಿ ಇಂಜಿನಿಯರಿಂಗ್ ಕಾಲೇಜು, 1924 ರಲ್ಲಿ ಮೆಡಿಕಲ್ ಕಾಲೇಜು ಬೆಂಗಳೂರಿನಲ್ಲಿ ಸ್ಥಾಪಿತವಾಗಿ, ಮೆಡಿಕಲ್ ಕಾಲೇಜು ತರುವಾಯ ಮೈಸೂರಿಗೆ ಸ್ಥಳಾಂತರ ಹೊಂದಿತು.

ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಕೂಡಲೇ ಮದರಾಸು ವಿಶ್ವವಿದ್ಯಾನಿಲಯ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸುವುದು ನಿಂತು ಶಿಕ್ಷಣ ಕ್ರಮದಲ್ಲಿ ಒಂದಷ್ಟು ಬದಲಾವಣೆಗಳಾದವು. ಮದರಾಸು ಪದ್ಧತಿಯ ಪ್ರಕಾರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ತರುವಾಯ ವಿದ್ಯಾರ್ಥಿ ಎರಡು ವರ್ಷಗಳ ಇಂಟರ್‌ಮೀಡಿಯೇಟ್ ಕಾಲೇಜು ವ್ಯಾಸಂಗ ಮಾಡಿ ಉತ್ತೀರ್ಣನಾದ ಮೇಲೆ ಎರಡು ವರ್ಷಗಳ ಬಿ.ಎ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಗೆ ಕುಳಿತುಕೊಳ್ಳಬಹುದಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯ ಈ ಪದ್ಧತಿಯನ್ನು ಸ್ವಲ್ಪ ಬದಲಾಯಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಒಂದು ವರ್ಷ ಅವಧಿಯ ಯೂನಿವರ್ಸಿಟಿ ಎನ್‌ಟ್ರಾನ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ಕಾಲೇಜುಗಳಲ್ಲಿ ಮೂರು ವರ್ಷ ಓದಿ ಬಿ.ಎ. ಪದವಿ ಪಡೆಯುವ ಅವಕಾಶವನ್ನು ವಿದ್ಯಾರ್ಥಿಗಳಿಗೆ

ನೀಡಿತು. ಮೂರು ವರ್ಷಗಳ ಈ ಕಾಲೇಜು ಶಿಕ್ಷಣ ಪದ್ಧತಿಯಲ್ಲಿ ಮೊದಲ ವರ್ಷದ ಕೊನೆಯಲ್ಲಿ ನಡೆಯುವ ಪರೀಕ್ಷೆಯಲ್ಲಿ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಇನ್ನೂ ಮೊದಲಾದ ವಿಜ್ಞಾನಗಳಲ್ಲಿ ಪ್ರಥಮ ದರ್ಜೆಯ ಅಂಕಗಳನ್ನು ಪಡೆದವರಿಗೆ ಮುಂದೆರಡು ವರ್ಷಗಳಲ್ಲಿ ಬಿ.ಎಸ್ಸಿ. ಪರೀಕ್ಷೆಗೆ ಓದಲು ಸಹ ಅವಕಾಶ ಕಲ್ಪಿಸಲಾಗಿತ್ತು. ಆ ಪರೀಕ್ಷೆ ಮದರಾಸು ವಿಶ್ವವಿದ್ಯಾನಿಲಯದ ಆನರ್ಸ್ ಪರೀಕ್ಷೆಗೆ ಸಮವೆಂದು ಪರಿಗಣಿಸಲಾಗಿತ್ತು. ಬೆಂಗಳೂರು ಸೆಂಟ್ರಲ್ ಕಾಲೇಜ್‌ನಲ್ಲಿ ಬಿ.ಎಸ್ಸಿ. ಶಿಕ್ಷಣಕ್ಕೆ ತರಗತಿಗಳಿದ್ದು, ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮತ್ತು ಎಂ.ಎ. ತರಗತಿಗಳು ನಡೆಯುತ್ತಿದ್ದವು.

1923ರ ಹೊತ್ತಿಗೆ ವಿಶ್ವವಿದ್ಯಾನಿಲಯ ವ್ಯಾಸಂಗಕ್ಕಾಗಿ ಬರುತ್ತಿದ್ದ ಎನ್‌ಟ್ರಾನ್ಸ್ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಲು ಆಗ ಕುಲಪತಿಗಳಾಗಿದ್ದ ಡಾ.ಬಜೇಂದ್ರನಾಥ್ ನೇಲ್‌ರವರ ಅಧ್ಯಕ್ಷತೆಯಲ್ಲಿ ಪರೀಕ್ಷಾ ವಿಭಾಗದ ಪರಿಷ್ಕರಣದ ಬಗ್ಗೆ ಒಂದು ಸಮಿತಿ ರಚನೆಯಾಗಿ ಆ ಸಮಿತಿಯ ನಿರ್ಣಯದ ಪ್ರಕಾರ ಎನ್‌ಟ್ರಾನ್ಸ್ ಪರೀಕ್ಷೆ ರದ್ದಾಗಿ ಎರಡು ವರ್ಷಗಳ ಇಂಟರ್‌ಮೀಡಿಯೇಟ್ ಕಾಲೇಜು ಶಿಕ್ಷಣ ಕ್ರಮ ಹಾಗೂ ಆ ತರುವಾಯ ಎರಡು ವರ್ಷಗಳ ಶಿಕ್ಷಣ ಅವಧಿಯಲ್ಲಿ ವಿಷಯಗಳನ್ನು ಓದಿದವರಿಗೆ ಬಿ.ಎಸ್ಸಿ. ಮತ್ತು ಕಲೆಯ ವಿಷಯಗಳನ್ನು ಓದಿದವರಿಗೆ ಬಿ.ಎ. ಪದವಿ ನೀಡುವ ಪದ್ಧತಿ ರೂಢಿಗೆ ಬಂದಿತು. ಉಚ್ಛಮಟ್ಟದ ಮೂರು ವರ್ಷಗಳ ಅವಧಿಯ ಶಿಕ್ಷಣ ಪಡೆದು ಅದಕ್ಕೆ ಸೀಮಿತವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಬಿ.ಎ. (ಆನರ್ಸ್) ಅಥವಾ ಬಿ.ಎಸ್ಸಿ. (ಆನರ್ಸ್) ಪದವಿ ನೀಡುವುದು ಸಹ ರೂಢಿಗೆ ಬಂದಿತು. 1927 ರಲ್ಲಿ ವಿಶ್ವವಿದ್ಯಾನಿಲಯದ ಈ ಶಿಕ್ಷಣ ಸಂಸ್ಥೆ ಸರ್ಕಾರದಿಂದ ಅಂಗೀಕೃತವಾಗಿ ಇಂಟರ್ ಮೀಡಿಯೇಟ್ ವ್ಯಾಸಂಗದ ಬಗ್ಗೆ ಕ್ರಮ ಕೈಗೊಳ್ಳುವ ಹೊಣೆ ವಿಶ್ವವಿದ್ಯಾನಿಲಯದ್ದಾಯಿತು. ಅಂದು ಮೈಸೂರು, ಬೆಂಗಳೂರು, ತುಮಕೂರು, ಶಿವಮೊಗ್ಗಗಳಲ್ಲಿ ಇಂಟರ್‌ಮೀಡಿಯೇಟ್ ಕಾಲೇಜುಗಳನ್ನು ತೆರೆಯಲಾಯಿತು.

ಮೈಸೂರಿನಲ್ಲಿ ಇಂಟರ್ ಮೀಡಿಯೇಟ್ ತರಗತಿಗಳನ್ನು ಪ್ರಾರಂಭಿಸಲು ಕಟ್ಟಡಗಳು ಇರಲಿಲ್ಲ. ಆದಕಾರಣ ಕಟ್ಟಡದ ಶಂಕುಸ್ಥಾಪನೆಯ ಕಾರ್ಯಕ್ರಮವನ್ನು 1927ರ ಆಗಸ್ಟ್ 8ನೇ ತಾರೀಖಿನಂದು ಬಜೇಂದ್ರನಾಥ್ ನೇಲ್‌ರವರು ನೆರವೇರಿಸಿದ್ದಾರೆ. ಅಂದು ಮೈಸೂರಿನ ಮಹಾರಾಜ ಕಾಲೇಜು ಪ್ರಿನ್ಸಿಪಾಲರ ನೇತೃತ್ವದಲ್ಲಿ ನಡೆಯುತ್ತಾ ಅದರ ಆಡಳಿತಕ್ಕೆ ಒಬ್ಬ ಸೂಪರಿಂಟೆಂಡೆಂಟ್‌ರನ್ನು ತೆಗೆದುಕೊಳ್ಳಲಾಗಿತ್ತು. ಮೊದಲ ಸೂಪರಿಂಟೆಂಡೆಂಟ್‌ರಾದ ಎಸ್.ವಿ.ಕೃಷ್ಣಸ್ವಾಮಿ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಕಾಲೇಜಿನಲ್ಲಿ ಕಲಾ ಮತ್ತು ವೈಜ್ಞಾನಿಕ ವಿಭಾಗಗಳನ್ನು ನಡೆಸಿ ಅದರ ವಿಜ್ಞಾನ ವಿಭಾಗದ ಪ್ರಯೋಗಶಾಲೆಯನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಯೋಗಶಾಲೆಯ ಮಟ್ಟಕ್ಕೆ ತಂದರು. ಪ್ರಾರಂಭದಲ್ಲಿ ಮೈಸೂರು ಇಂಟರ್ ಮೀಡಿಯೇಟ್ ಕಾಲೇಜಿಗೂ ಮಹಾರಾಜ ಕಾಲೇಜಿಗೂ ಹೆಚ್ಚಿನ ಅಂತರವಿರಲಿಲ್ಲ. ಕೆಲವು

ತರಗತಿಗಳು ಇಂಟರ್ ಮೀಡಿಯೇಟ್ ಕಾಲೇಜ್‌ನಲ್ಲಿ ನಡೆದರೆ, ಮಹಾರಾಜ ಕಾಲೇಜಿನ ಉಪನ್ಯಾಸ ಕೊಠಡಿಯಲ್ಲಿ ಕೆಲವು ತರಗತಿಗಳು ನಡೆಯುತ್ತಿದ್ದವು. ಮಹಾರಾಜ ಕಾಲೇಜಿನ ಅಧ್ಯಾಪಕರು ಇಂಟರ್‌ಮೀಡಿಯೇಟ್ ತರಗತಿಗಳನ್ನು ಬೋಧಿಸುತ್ತಿದ್ದರು. 1948 ರಲ್ಲಿ ಈ ಕಾಲೇಜಿನಲ್ಲಿ ಬಿ.ಎಸ್ಸಿ. ಶಿಕ್ಷಣವನ್ನು ಪ್ರಾರಂಭಿಸಿ ಅದನ್ನು ಪ್ರಥಮ ದರ್ಜೆಯ ಕಾಲೇಜನ್ನಾಗಿ ಮಾಡಿದರು. ಕಾಲೇಜಿನ ರಜತ ಮಹೋತ್ಸವ ಕಾಲದಲ್ಲಿ ಅದಕ್ಕೆ ಯುವರಾಜ ಕಾಲೇಜು ಎಂಬ ಹೆಸರಾಯಿತು.

ಇಂಟರ್ ಮೀಡಿಯೇಟ್ ವ್ಯಾಸಂಗ ಕ್ರಮ ರೂಢಿಗೆ ಬಂದ ತರುವಾಯದಲ್ಲಿ ಅಗತ್ಯಕ್ಕೆ ತಕ್ಕಂತೆ ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ಇಂಗ್ಲೀಷ್ ಪ್ರಮಾಣವನ್ನು ಕಡಿಮೆ ಮಾಡಿ ಕನ್ನಡಕ್ಕೆ ಹೆಚ್ಚು ಗಮನ ನೀಡಲಾಗಿತ್ತು. ಬಿ.ಎಂ.ಶ್ರೀ.ಯವರು ರಿಜಿಸ್ಟ್ರಾರ್‌ರಾಗಿದ್ದ ಕಾಲದಲ್ಲಿ ಕನ್ನಡ ಎಂ.ಎ.ತರಗತಿಯನ್ನು ಜುಲೈ 1927 ರಲ್ಲಿ ಮಹಾರಾಜ ಕಾಲೇಜಿನಲ್ಲಿ ಆರಂಭಿಸಲಾಯಿತು. 1927–28ರ ಪ್ರಥಮ ತಂಡದ ಎಂ.ಎ. ಪದವೀಧರರಾದ ಎನ್.ಅನಂತರಂಗಾಚಾರ್, ಕೆ.ವೆಂ.ಕಟರಾಮಪ್ಪ, ಡಿ.ಕೆ.ಭೀಮಸೇನರಾವ್, ಬಿ.ಎನ್.ನಂಜುಂಡಯ್ಯ, ಎಂ.ಅಳಸಿಂಗಾಚಾರ್, ಕೆ.ವಿ.ಪುಟ್ಟಪ್ಪ, ಡಿ.ಎಲ್.ನರಸಿಂಹಾಚಾರ್ ಮೊದಲಾದವರು ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ನಾಡಿಗೆ ಅಪಾರ ಕೀರ್ತಿ ತಂದಿದ್ದಾರೆ.

ಯುವರಾಜ ಮತ್ತು ಮಹಾರಾಜ ಪ್ರಾರಂಭ ಕಾಲದ ಅಧ್ಯಾಪಕ ಹಾಗೂ ಪ್ರಾಧ್ಯಾಪಕರ ಹೆಸರುಗಳು ಇಂದಿಗೂ ಹೆಸರುವಾಸಿಯಾಗಿದೆ.ರಾಷ್ಟ್ರಕವಿ ಕುವೆಂಪು, ಡಾ.ಜಗಪತಿನಾಯ್ಡು, ಜಂಬುನಾಥನ್, ನಾ.ಕಸ್ತೂರಿ, ತೀ.ನಂ.ಶ್ರೀ. ಮೊದಲಾದವರಿಗೆ ಶಿಕ್ಷಣ ವೃತ್ತಿ ಪ್ರಾರಂಭವಾದದ್ದು ಯುವರಾಜ ಕಾಲೇಜಿನಲ್ಲಿ. ಡಾ.ಸಿ.ಆರ್.ರೆಡ್ಡಿ, ಎನ್.ಎಸ್.ಸುಬ್ಬರಾವ್, ಡಾ.ಎಸ್.ರಾಧಾಕೃಷ್ಣನ್, ಡಾ.ಮುಖರ್ಜಿ, ಪ್ರೊ.ವೆಂಕಟೇಶ್ವರ್, ಎಂ.ಎಚ್.ಕೃಷ್ಣ, ಬಿ.ಎಂ.ಶ್ರೀ, ಪ್ರೊ.ವೆಂಕಣ್ಣಯ್ಯ, ಪ್ರೊ.ಎ.ಆರ್.ವಾಡಿಯಾ, ಪ್ರೊ.ರಾಲೊ, ಎ.ಎನ್.ಮೂರ್ತಿರಾವ್, ಎಸ್.ವಿ.ರಂಗಣ್ಣ, ಬಿ.ಹನ್ಮಂತರಾವ್, ಕೆ.ಬಿ.ಮಾಧವ, ಎ.ಆರ್.ಕೃಷ್ಣಶಾಸ್ತ್ರಿ ಮೊದಲಾದ ಹೆಸರಾಂತ ವಿದ್ವಾಂಸರು ಮಹಾರಾಜ ಕಾಲೇಜಿನ ಶಿಕ್ಷಕರಾಗಿದ್ದರು. ಎಂ.ವಿ.ಗೋವಿಂದಸ್ವಾಮಿಯವರು 1924 ರಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದರು. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಯೋಗಿಕ ಮನಃಶಾಸ್ತ್ರ ಶಾಖೆಯನ್ನು ಪ್ರಾರಂಭಿಸಿದರು. ಕನ್ನಡ ವಿಭಾಗ ಪ್ರಾರಂಭದಲ್ಲಿ ಬಿ.ಎಂ.ಶ್ರೀ, ವೆಂಕಣ್ಣಯ್ಯ ಹಾಗೂ ಎ.ಆರ್.ಕೃಷ್ಣಶಾಸ್ತ್ರಿಗಳ ಆಸಕ್ತಿಯಿಂದ ಅಲ್ಲದೆ ಅವರ ನಂತರ ಬಂದ ಕುವೆಂಪು, ದೇಜಗೌ, ಹಾಗೂ ಹಾ.ಮಾ.ನಾಯಕ್ ರವರ ಸತತ ಪ್ರಯತ್ನದಿಂದ ಬೆಳೆದು ಕನ್ನಡ ಸ್ನಾತಕೋತ್ತರ ಅಧ್ಯಯನ ಚಿನ್ನದ ಹಬ್ಬ 10ನೆಯ ಆಗಸ್ಟ್ 1979 ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಡೆಯಿತು. ಬಿ.ಎಂ.ಶ್ರೀ. ಯವರು ಪ್ರಾಧ್ಯಾಪಕರಾಗಿದ್ದಾಗ 1931 ರಲ್ಲಿ ಅವರ ಸಂಪಾದಕತ್ವದಲ್ಲಿ ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ ಆರಂಭವಾಯಿತು. 1956 ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದ ಪರಿಣಾಮವಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ದಕ್ಷಿಣ ಕನ್ನಡ ಹಾಗೂ

ಕೊಡಗು ಜಿಲ್ಲೆಗಳ ಕಾಲೇಜುಗಳು ಸೇರಿದವು. 1957 ರಲ್ಲಿ ವಿಶ್ವವಿದ್ಯಾನಿಲಯ ಸರ್ಕಾರದ ಆಡಳಿತದಿಂದ ಮುಕ್ತವಾಗಿ ಸ್ವಯಂಮಾಡಳಿತ ಸಂಸ್ಥೆಯಾಯಿತು. ಹೊಸ ಕಾಯಿದೆಯ ಪ್ರಕಾರ ಸರ್ಕಾರದ ಕಾಲೇಜುಗಳು ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟವು. ಸೆನೆಟ್ ಹಾಗೂ ಸಿಂಡಿಕೇಟ್ ಸಭೆಗಳು ಪುನಃರಚನೆಗೊಂಡವು. ಪರೀಕ್ಷೆಗಳ ಬಗ್ಗೆ ಪರೀಕ್ಷೆ ವಿಭಾಗ ಏರ್ಪಟ್ಟು ಅದು ಪರೀಕ್ಷಾಧಿಕಾರಿಗಳ ನಿಯಂತ್ರಣಕ್ಕೊಳಪಟ್ಟಿತು. ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ ಕ್ರಾಪರ್ಡ್ ಅವರು ಆರಸರ ಆಳ್ವಿಕೆಯ ಕಾಲದಲ್ಲಿ "ಪ್ರಜಾಪ್ರತಿನಿಧಿ ಸಭೆ"ಯ ದಸರಾ ಅಧಿವೇಶನಗಳು ನಡೆಯಲು ಕಟ್ಟಿಸಿದ್ದ ಕ್ರಾಪರ್ಡ್ ಹಾಲ್ ಸೌಧದಲ್ಲಿ ನೆಲೆಗೊಂಡು, ಅದರ ವಿವಿಧ ಆಡಳಿತ ಭಾಗಗಳು ಹಾಗೂ ಸಭೆಗಳು ಅಲ್ಲಿ ನಡೆಯುತ್ತಿವೆ.

ಪದವಿಪೂರ್ವ ಶಿಕ್ಷಣ 12 ವರ್ಷಗಳಿಗೆ ಸೀಮಿತವಾಗಿರಬೇಕೆಂಬ ಭಾರತ ಸರ್ಕಾರದ ನೀತಿಯ ಪ್ರಕಾರ ಇಂಟರ್‌ಮೀಡಿಯೇಟ್ ಪರೀಕ್ಷೆ ರದ್ದಾಗಿ ಪಿಯುಸಿ ಶಿಕ್ಷಣ ಮಂಡಳಿ ಸ್ಥಾಪನೆಯಾಯಿತು. ಆಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೂರು ವರ್ಷಗಳ ಬಿ.ಎ. ಮತ್ತು ಬಿ.ಎಸ್ಸಿ. ತರಗತಿಗಳು ಪ್ರಾರಂಭವಾದವು. 1962 ರಲ್ಲಿ ಮಂಗಳೂರಿನ ಕೊಣಾಜಿಯಲ್ಲಿ ಮಂಗಳ ಗಂಗೋತ್ರಿ ಎಂಬ ಸ್ನಾತಕೋತ್ತರ ಕೇಂದ್ರವಾಯಿತು. 1964 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ, 1980 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ, ನಂತರ ಕುವೆಂಪು ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿ ಮೈಸೂರು, ಮಂಡ್ಯ, ಹಾಸನ ನಂತರ ಚಾಮರಾಜನಗರ ಜಿಲ್ಲೆಗಳಿಗೆ ಅಲ್ಲಿನ ಕಾಲೇಜುಗಳಿಗೆ ಸೀಮಿತವಾಯಿತು. ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮೊದಲನೆಯ ವಿಶ್ವವಿದ್ಯಾನಿಲಯವಾಗಿದೆ.

ರಾಜಸೇವಾ ಧುರೀಣ ಎಂ.ಕಾಂತರಾಜೇ ಅರಸು ಅವರ ಅಳಿಯಂದಿರಾದ ಸರದಾರ್ ಕೆ.ಬಸವರಾಜ ಅರಸು ಅವರು ತಮ್ಮ ಜಯಲಕ್ಷ್ಮಿವಿಲಾಸ ಬೃಹತ್ ಬಂಗಲೆಯನ್ನು ಅದಕ್ಕೆ ಸೇರಿದ ಸುಮಾರು 350 ಎಕರೆಗಳಷ್ಟು ವಿಶಾಲವಾದ ಬಯಲನ್ನು ವಿದ್ಯಾಭಿವೃದ್ಧಿಗಾಗಿ ಕೊಡಬೇಕೆಂದು ನಿಶ್ಚಯಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸುಲಭ ಬೆಲೆಗೆ ಮಾರಿದರು. ಅಷ್ಟೇ ಅಲ್ಲದೆ ತಮ್ಮ ಪತ್ನಿ ರಾಜಕುಮಾರಿ ಲೀಲಾವತಿ ದೇವಿಯವರ ಹೆಸರಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ವಿಶ್ವವಿದ್ಯಾನಿಲಯಕ್ಕೆ ದತ್ತಿಯಾಗಿ ನೀಡಿದರು. 1960 ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಂಪಾದಿಸಿಕೊಂಡ ಜಯಲಕ್ಷ್ಮೀ ವಿಲಾಸ ಬಂಗಲೆಗೆ ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದ ಸ್ನಾತಕೋತ್ತರ ತರಗತಿಗಳು ವರ್ಗವಾದವು. ಬೆಂಗಳೂರಿನ ವಿಜ್ಞಾನ ಬೋಧಕ ಸೆಂಟ್ರಲ್ ಕಾಲೇಜು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿ ಹೋದುದರಿಂದ ಮೈಸೂರು ವಿಶ್ವವಿದ್ಯಾನಿಲಯ ವಿವಿಧ ವಿಜ್ಞಾನ ಹಾಗೂ ಗಣಿತಶಾಸ್ತ್ರಗಳ ಸಂಬಂಧದಲ್ಲಿ ಸ್ನಾತಕ್ಕೋತ್ತರ ವಿಭಾಗಗಳನ್ನು ಹೊಸದಾಗಿ ಪ್ರಾರಂಭಿಸಬೇಕಾಯಿತು. ವಿಶ್ವವಿದ್ಯಾನಿಲಯ ನೂತನ ಬಡಾವಣೆಗೆ ಅಂದಿನ ಕುಲಪತಿಗಳಾಗಿದ್ದ ರಾಷ್ಟ್ರಕವಿ ಕುವೆಂಪುರವರು ಮಾನಸಗಂಗೋತ್ರಿ ಎಂದು ಹೆಸರಿಟ್ಟರು. ವಿಶ್ವವಿದ್ಯಾನಿಲಯ

'ನಹಿಜ್ಞಾನೇನ ಸದೃಶಂ' ಎಂಬ ತನ್ನ ಲಾಂಛನ ಸೂಕ್ತಿಗೂ ಮಾನಸಗಂಗೋತ್ರಿ ಎಂಬ ಹೆಸರಿಗೂ ತಕ್ಕಂತೆ ಜ್ಞಾನ ಪ್ರಸಾರ ಕಾರ್ಯವನ್ನು ವಿಸ್ತರಿಸಿ ಹಲವಾರು ವಿಷಯಗಳಿಗೆ ಸಂಬಂಧಪಟ್ಟಂತೆ ಸ್ನಾತಕ ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ನೀಡುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯ ಬಹುಮುಖ್ಯವಾಗಿ ಬೆಳೆಸಿದ ಕುಲಪತಿಗಳ ಪರಂಪರೆ ವಿಶಿಷ್ಟವಾದದ್ದು ಎಚ್.ವಿ.ನಂಜುಂಡಯ್ಯನವರು ಪ್ರಥಮ ಕುಲಪತಿ ಅವರ ನಂತರ ಬ್ರಜೇಂದ್ರನಾಥ್ ನೇಲ್, ಇ.ಸಿ.ಮಟಕಾಫ್, ಎನ್.ಎಸ್.ಸುಬ್ಬರಾವ್, ಇ.ಜಿ.ಮೈಕಲ್‌ಪೈನ್, ಟಿ.ಸಿಂಗಾರವೇಲು ಮೊದಲಿಯರ್,ಎಂ. ಸುಲ್ತಾನ್ ಮೊಹಿಯುದ್ದೀನ್, ಬಿ.ಎಲ್.ಮಂಜುನಾಥ್ ,ವಿ.ಎಲ್.ಡಿಸೌಜಾ, ಕೆ.ವಿ.ಪುಟ್ಟಪ್ಪ, ಎನ್.ಎ.ನಿಕ್ಕಂ, ಕೆ.ಎಂ.ಪಣಿಕ್ಕರ್, ಕೆ.ಎಲ್.ಶ್ರೀಮಾಲಿ, ದೇಜಗೌ, ಡಿ.ವಿ.ಅರಸ್, ಕೆ.ಎಸ್.ಹೆಗ್ಗಡೆ, ವೈ.ಪಿ.ರುದ್ರಪ್ಪ, ಶ್ರೀಮತಿ ಪಿ.ಸೆಲ್ವಿದಾಸ್, ಎಂ.ಮಾದಯ್ಯ, ಎಸ್.ಎನ್.ಹೆಗ್ಗಡೆ, ಜೆ.ಶಶಿಧರಪ್ರಸಾದ್, ವಿ.ಜಿ.ತಳವಾರ್, ಕೆ.ಎಸ್.ರಂಗಪ್ಪ, ಹೇಮಂತ್ ಕುಮಾರ್ ರವರುಗಳು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾರೆ.

ಕುವೆಂಪು ಅವರು ಕುಲಪತಿಯಾಗಿದ್ದ ಕಾಲಕ್ಕೆ ಮಾನಸಗಂಗೋತ್ರಿ ರೂಪುತಾಳಿತು. ದೇ.ಜ.ಗೌ ಅವರ ಸತತ ಪ್ರಯತ್ನದಿಂದ ವಿವಿಧ ವಿಭಾಗಗಳು ರಚನೆಯಾದವು. ಕನ್ನಡ ಸ್ನಾತಕೋತ್ತರ ವಿಭಾಗ, ಮಹಾರಾಜ ಕಾಲೇಜಿನಿಂದ ಮಾನಸಗಂಗೋತ್ರಿಗೆ ಸ್ಥಳಾಂತರ ಹೊಂದಿ 1966 ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಾಗಿ ಬೆಳೆಯಿತು. ಇದಕ್ಕೆ ದೇಜಗೌ ಮತ್ತು ಹಾ.ಮಾ.ನಾಯಕರ ದುಡಿಮೆ ಎಂದರೆ ತಪ್ಪಾಗಲಾರದು.

ದೇಜಗೌ ಅವರು ಕುಲಪತಿಗಳಾಗಿದ್ದಾಗ ವಿಶ್ವವಿದ್ಯಾನಿಲಯದ ವಿವಿಧ ಶಾಲೆಗಳಿಗೆ ಮುದ್ರಣ ಸೌಕರ್ಯವನ್ನು ಒದಗಿಸಲು ಅನುಕೂಲವಾಗುವಂತೆ ವಿಶ್ವವಿದ್ಯಾನಿಲಯದ ಮುದ್ರಣಾಲಯ ನೂತನ ಮುದ್ರಣ ಯಂತ್ರಗಳೊಂದಿಗೆ ಸಿದ್ಧವಾಯಿತು. ಅಲ್ಲಿ ಪಠ್ಯಪುಸ್ತಕಗಳು ಅಂಚೆ ಮತ್ತು ತೆರಪಿನ ಶಿಕ್ಷಣದ ಪಠ್ಯಲೇಖನಗಳು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ, ಗೆಜೆಟ್ ಹಾಗೂ ಜರ್ನಲ್‌ಗಳು ಪ್ರಬುದ್ಧ ಕರ್ನಾಟಕ, ವಿಜ್ಞಾನ ಕರ್ನಾಟಕ, ಮಾನವಿಕ ಕರ್ನಾಟಕ, ವಿವರಣಾತ್ಮಕ ಗ್ರಂಥಸೂಚಿ ಮೊದಲಾದವು ಪ್ರಕಟವಾಗುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯ, ಬಿ.ಎ., ಬಿ.ಎಸ್ಸಿ., ಬಿ–ಮ್ಯೂಸಿಕ್, ಬಿಬಿಎಂ, ಬಿ.ಕಾಂ. ಇನ್ನೂ ಮೊದಲಾದ ಸ್ನಾತಕಪೂರ್ವ ಪದವಿಗಳನ್ನು, ಸ್ನಾತಕೋತ್ತರ ಪದವಿಗಳಾದ ಎಂ.ಎ., ಎಂ.ಎಸ್ಸಿ., ಎಂ.ಇಡಿ., ಎಂ.ಕಾಂ., ಎಂ–ಮ್ಯೂಸಿಕ್, ಎಂ.ಎಸ್.ಡಬ್ಲ್ಯೂ, ಎಂ.ಬಿ.ಎ., ಎಂ.ಸಿ.ಎ., ಎಲ್.ಎಲ್.ಎಂ., ಎಂ.ಫಿಲ್ ಮೊದಲಾದವುಗಳು. ಅಲ್ಲದೆ ಡಿಲಿಟ್, ಡಿ.ಎಸ್.ಸಿ., ಡಿ.ಇಡಿ., ಡಿ.ಇ., ಪಿಎಚ್.ಡಿ. ಡಾಕ್ಟರೇಟ್ ಪದವಿಗಳನ್ನು ನೀಡುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯ 1968ರಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸೌಲಭ್ಯವನ್ನು ಒದಗಿಸಲಾಯಿತು. ಇದೇ ಸಂಸ್ಥೆ 1996ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ, ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಜಿಲ್ಲೆಯ ಕಾಲೇಜುಗಳು ಸಹ ಸೇರಿವೆ. ಅಲ್ಲದೆ ಅನೇಕ ವೈದ್ಯಕೀಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಕೂಡ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿವೆ.

ಒಟ್ಟಾರೆ ಮೈಸೂರು ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ದೂರದೃಷ್ಟಿ ಫಲದಿಂದ ಮೈಸೂರು ವಿಶ್ವವಿದ್ಯಾನಿಲಯ ಕರ್ನಾಟಕದ ಮೊದಲನೆಯ ವಿಶ್ವವಿದ್ಯಾನಿಲಯವಾಗಿ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಗೆ ಮಾರ್ಗಸೂಚಿಯಾಗಿ ತನ್ನ ಹಿರಿಮೆ ಗರಿಮೆಯನ್ನು ಉಜ್ವಲಗೊಳಿಸಿದೆ. ಕೇವಲ ಪದವೀಧರರನ್ನು ತಯಾರು ಮಾಡದೆ ಒಳ್ಳೆಯ ಚಾರಿತ್ರ್ಯವುಳ್ಳ ಸಂಯಮ ಸಂಸ್ಕೃತಿ ರೂಢಿಸಿಕೊಂಡ ಸುಸಂಸ್ಕೃತರನ್ನು ವಿಶ್ವವಿದ್ಯಾನಿಲಯ ಸಾಕ್ಷಾತ್ಕಾರಗೊಳಿಸಿದಲ್ಲಿ ಭಾರತದ ಉನ್ನತ ಶಿಕ್ಷಣದಲ್ಲಿ ಈ ವಿಶ್ವವಿದ್ಯಾನಿಲಯದ ಪಾತ್ರ ಗಮನಾರ್ಹವಾಗುತ್ತದೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದರು. 1919ರ ಘಟಿಕೋತ್ಸವದಲ್ಲಿ ನಾಲ್ವಡಿಯವರು ವಿಶ್ವವಿದ್ಯಾನಿಲಯದ ಜ್ಞಾನಪ್ರವಾಹವು ಜನಸಾಮಾನ್ಯನನ್ನು ಮುಟ್ಟಿ ಅವನ ಸಂಸ್ಕೃತಿಯನ್ನು ಸಂಸ್ಕರಿಸಬೇಕೆಂದು ಆಸೆಪಟ್ಟಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಅಭಿಪ್ರಾಯದಂತೆ ವಿಶ್ವವಿದ್ಯಾನಿಲಯದ ಜ್ಞಾನವು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ತಲುಪಬೇಕೆಂಬುದಾಗಿತ್ತು. ಆದಕಾರಣ ವಿಶ್ವವಿದ್ಯಾನಿಲಯದಲ್ಲಿ ಬೇರೆ ಬೇರೆ ಕೋರ್ಸುಗಳಿಗೆ ಅವಕಾಶವನ್ನು ನೀಡಿದ್ದಾರೆ.[8] ಅವರು ನೀಡಿದಂತಹ ಕೊಡುಗೆಯೆ ಇಂದು ಮೈಸೂರು ವಿಶ್ವವಿದ್ಯಾನಿಲಯ ಹೆಮ್ಮರವಾಗಿ ಬೆಳೆಯಲು ಸಹಕಾರಿಯಾಗಿದೆ.

## ಕೊನೆಟಿಪ್ಪಣಿಗಳು

1. ಜಿ.ಎಸ್.ಭಟ್ಟ (ಸಂ) – ಮೈಸೂರು ದರ್ಶನ, ಪ್ರಕಾಶಕರು ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲೆ, ಪ್ರಕಟಣೆ 2010, ಪು.ಸಂ.1.
2. ಡಾ.ಸುಭಾಷ್ ಭರಣಿ, ಐಪಿಎಸ್ – ಧರೆಗೆ ದೊಡ್ಡವರು, ದ್ರಾವಿಡ ಪಬ್ಲಿಕೇಷನ್ಸ್, ಮೈಸೂರು, ಪ್ರಕಟಣೆ 2005, ಪು.ಸಂ.73.
3. ಡಾ.ಎಸ್.ಎನ್.ಚಿಕ್ಕಮಾದು – ಮೈಸೂರು ತಾಲ್ಲೂಕು ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2010, ಪು.ಸಂ.171.
4. ಅದೇ ಪು.ಸಂ.171.
5. ದಿ ಮೈಸೂರು ಯೂನಿವರ್ಸಿಟಿ ಕ್ಯಾಲೆಂಡರ್ 1908–19 ಪು.ಸಂ.18.
6. ಸರ್.ಎಂ.ವಿಶ್ವೇಶ್ವರಯ್ಯ – ನನ್ನ ವೃತ್ತಿ ಜೀವನದ ನೆನಪುಗಳು, ಪು.ಸಂ.93.
7. ಡಾ.ಎಂ.ಎಸ್.ಅನಿತಾ– ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1844–1940), ಪ್ರಕಾಶಕ್ರು ಪ್ರಿಯದರ್ಶಿನಿ, ಬೋಗಾದಿ 2ನೇ ಹಂತ, ಮೈಸೂರು ದಕ್ಷಿಣ, ಮೈಸೂರು, ಪ್ರಕಟಣೆ 2012, ಪು.ಸಂ.348.
8. ಅದೇ ಪು.ಸಂ.269.